

ದೊಡ್ಡ ದಾಸ ಮಂಗಟ್ಟೆ(great indian hornbill)
ಚಿತ್ರ: ಪ್ರಶಾಂತ್ ಎಚ್.ಜಿ.



ಕಂಚುಕುಟಿಗ ಹಕ್ಕಿ ಮರಿ ಮತ್ತು ತಾಯಿ ಹಕ್ಕಿ (coppersmith barbet)
ಚಿತ್ರ: ಕೃಷ್ಣಕುಮಾರ್ ಪಿ.ಎಸ್.



ಹೊಂಬೆನ್ನಿನ ಮರಕುಟಿಗ (Lesser golden backed woodpecker) ಚಿತ್ರ: ಡಾ.ಜಿ.ವಿ.ಆನಂದಮೂರ್ತಿ



ಕೆಂದಲೆ ಗಿಳಿಗಳು (plum headed parakeets)



ಮರಿಗೆ ಗುಟುಕು ನೀಡುತ್ತಿರುವ ಕಂಚುಕುಟಿಗ (coppersmith barbet) ಚಿತ್ರ: ಕೃಷ್ಣಕುಮಾರ್ ಪಿ.ಎಸ್.



ಗೂಡಿನಿಂದ ಇಣುಕಿ ನೋಡುತ್ತಿರುವ ಕಂಚುಕುಟಿಗ ಹಕ್ಕಿ ಮರಿ

ಬದುಕು ಇದಕ್ಕೊಂದು ಸೂಕ್ತ ಉದಾಹರಣೆ. ಕರ್ನಾಟಕದಲ್ಲಿ ಹದಿಮೂರು ಪ್ರಭೇದದ ಮರಕುಟಿಗಗಳಿವೆ. ಇವುಗಳ ಗೂಡು ಕಟ್ಟುವಿಕೆಯ ಕೆಲಸ ಆರಂಭವಾಗುವುದು ಮಳೆಗಾಲ ಮುಗಿದ ಮೇಲೆ. ಹೊಲ ಅಥವಾ ತೋಟದ ಹತ್ತಿರ ಏಕಾಂತದಲ್ಲಿ ಕುಳಿತಿದ್ದಾಗ ಇವುಗಳ ಟಪಟಪ ಶಬ್ದ ಬೆಚ್ಚಿ ಬೀಳಿಸಿದರೆ ಅಚ್ಚರಿಪಡಬೇಕಿಲ್ಲ.

ಜೋರಾಗಿ ಮಳೆ ಸುರಿದಾಗ ಗೂಡಿನೊಳಗೆ ನೀರು ಬರದಂತಹ ಕೋನ ಮತ್ತು ದಿಕ್ಕನ್ನು ಆಯ್ದುಕೊಂಡು ಗೂಡು ಕೊರೆಯುವ ಜಾಣ್ಮೆ ಅವುಗಳಿಗೆ ಕರಗತ. ಅವುಗಳ ಕೊಕ್ಕು ಗಡುಸಾಗಿರುತ್ತದೆ. ಮೊದಲಿಗೆ ಮರದ ಎಡಭಾಗಕ್ಕೆ, ಬಳಿಕ ಬಲಭಾಗಕ್ಕೆ ಕೊಕ್ಕಿನಿಂದ ಬಲವಾಗಿ ಬಡಿದು ಸಿಬುರೇಳುವಂತೆ ಮಾಡುತ್ತವೆ. ನಂತರದ್ದು ಸುಂದರವಾಗಿ ಗೂಡು ನಿರ್ಮಿಸುವ ಕೆಲಸ.

ಜೊತೆಗೆ, ಒಣಮರಗಳು ಹಲವು ಬಗೆಯ ಕೀಟಗಳನ್ನು ಬಹುಬೇಗ ಆಕರ್ಷಿಸುತ್ತವೆ. ಬೀಟಲ್ಸ್, ಇರುವೆಗಳು, ಕಂಬಳಿಹುಳುಗಳು ಇಂತಹ ಮರದ ಸಾಮಾನ್ಯ ಅತಿಥಿಗಳು. ಮರದ ತೊಗಟೆಯಲ್ಲಿಯೇ ಕೆಲವು ಕೀಟಗಳು ಗೂಡು ಕಟ್ಟುತ್ತವೆ. ಮತ್ತೊಂದೆಡೆ ಈ ಕೀಟಗಳೇ ಮರಕುಟಿಗಗಳ ಪ್ರಧಾನ ಆಹಾರ. ದಿನಕ್ಕೆ ಅವು ನೂರಾರು ಕೀಟಗಳನ್ನು ಭಕ್ಷಿಸುತ್ತವೆ. ಹಾಗಾಗಿ, ಒಣಮರ ಅವುಗಳ ಸಂತಾನಾಭಿವೃದ್ಧಿಯಲ್ಲಿ ಬಹುಮುಖ್ಯ ಪಾತ್ರವಹಿಸುತ್ತದೆ.

ಮರಕುಟಿಗ, ಕುಟ್ರ(ಬಾರ್ಬೆಟ್) ಹಕ್ಕಿಗಳು ಗೂಡು ಕೊರೆಯುತ್ತವೆ. ಕೆಲವು ಬಾತುಗಳು, ಗೂಬೆಗಳು, ನೀಲಿ ಹಕ್ಕಿಗಳು, ಮಂಗಟ್ಟೆ, ಗಿಳಿಗಳಿಗೆ ನೈಸರ್ಗಿಕ ಪೊಟರೆಗಳೇ ಗೂಡು ನಿರ್ಮಿಸಲು ಆಸರೆ. ಬೇರೆ ಪ್ರಾಣಿಗಳು ಬಳಸಿದ ಗೂಡುಗಳನ್ನು ಇವು ಬಳಸುವುದು ಉಂಟು. ಕೆಲವು ಗಿಡುಗ, ಹದ್ದಿನ ಜಾತಿಯ ಹಕ್ಕಿಗಳು ಒಣಮರದ ತುತ್ತತುದಿಯಲ್ಲಿ ಗೂಡು ನಿರ್ಮಿಸುತ್ತವೆ.

ಕಾಡಿನಲ್ಲಿ ಗಿರಿಜನರು ಕಿರು ಅರಣ್ಯ ಉತ್ಪನ್ನ ಸಂಗ್ರಹ ಮಾಡುತ್ತಾರೆ. ಕಾಡಂಚಿನ ಜನರು ಕೂಡ ಕಿರು ಅರಣ್ಯ ಉತ್ಪನ್ನ ಸಂಗ್ರಹಿಸುವುದು ಉಂಟು. ಮತ್ತೊಂದೆಡೆ ಅರಣ್ಯದ ಗಡಿಭಾಗದಲ್ಲಿ ಕೃಷಿ ಮಾಡಲು ಒಣಮರಗಳನ್ನು ಕಡಿಯಲಾಗುತ್ತದೆ. ಇದರಿಂದ ಈ ಮರಗಳನ್ನು ಆಶ್ರಯಿಸಿ ಬದುಕುವ ಪಕ್ಷಿಸಂಕುಲ ಆಪತ್ತಿಗೆ ಸಿಲುಕಿದೆ.